ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು	ಹೆಬ್ಬಾಳ	ಕನ್ನಡ
ಶ್ರೀ ಎಂ.ಪಿ. ಅಪ್ಪಚ್ಚು ರಂಜನ್	ಮಡಿಕೇರಿ	ಕನ್ನಡ
ಶ್ರೀ ಡಿ. ಸುಧಾಕರ	ಹಿರಿಯೂರು	ಕನ್ನಡ
ಶ್ರೀ ಚಂದ್ರಕಾಂತ್ ಗುರಪ್ಪ ಬೆಲ್ಲದ್	ಹುಬ್ಬಳ್ಳಿ-ಧಾರವಾಡ ಪಶ್ಚಿಮ	ಕನ್ನಡ

4. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಚಾರ

ವಿಷಯ: ಪ್ರಮಾಣವಚನ ಸ್ವೀಕಾರದ ಬಗ್ಗೆ ಆಕ್ಷೇಪಣೆ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ನೋಡುತ್ತಿದ್ದೇನೆ. ನಾನು ಇಲ್ಲಿ 9 ಸಲ ಶಪಥವಿಧಿ ಗ್ರಹಣ ಮಾಡಿದ್ದೇನೆ. ಯಾವಾಗಲೂ ಕೂಡ ಸಂವಿಧಾನಬಾಹಿರವಾಗಿ ಯಾರೂ ಹೇಳುವುದಿಲ್ಲ. ಇವತ್ತು ನಾನು ಗಮನಿಸುತ್ತಿದ್ದೇನೆ. ಒಬ್ಬರು ಹೆಬ್ಬಾಳ ಜನತೆಯ ಹೆಸರಿನಲ್ಲಿ. ಮತ್ತೊಬ್ಬರು ಇನ್ಯಾರದೋ ಹೆಸರಿನಲ್ಲಿ. ಮಗದೊಬ್ಬರು ತಂದೆ-ತಾಯಿ ಹೆಸರಿನ ಮೇಲೆ. ಈ ರೀತಿ ಪ್ರಮಾಣವಚನ ಸ್ವೀಕರಿಸುವುದು ಸರಿಯಿಲ್ಲ. ಚಟುವಟಿಕೆಗಳು ಚುನಾವಣೆಯಲ್ಲಿ ಸಂವಿಧಾನಬಾಹಿರದಲ್ಲಿ ಆಗಲಿ. ಕನಿಷ್ಟ ವಿಧಾನಸೌಧದಲ್ಲಾದರೂ ಸಂವಿಧಾನಬದ್ಧವಾಗಿ ನಡೆದುಕೊಳ್ಳೋಣವೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಹಂಗಾಮಿ ಅಧ್ಯಕ್ಷರು: ಈಗಾಗಲೇ ಪ್ರಮಾಣವಚನ ಹೇಗೆ ಸ್ವೀಕರಿಸಬೇಕೆಂದು ಒಂದು format ಅನ್ನು ಕೊಡಲಾಗಿದೆ. ಅದರ ಪ್ರಕಾರ ಸ್ವೀಕರಿಸಲಾಗಿದೆ. ಆದರೆ. ಗೌರವಾನ್ವಿತ ಸದಸ್ಯರು ಕೆಲವರು ಅಭಿಮಾನವಿಟ್ಟು ಈ ರೀತಿ ಮಾಡುತ್ತಿದ್ದಾರೆ. ಮಾಡಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಅಭಿಮಾನ ಇರಬಹುದು. ನಿಮ್ಮ ಪ್ರೀತಿ ಇರಬಹುದು. ನಿಮ್ಮ ಶ್ರದ್ಧೆ ಇರಬಹುದು. ಅದಕ್ಕೆ ಯಾರೂ ಅಡ್ಡ ಬರುವುದಿಲ್ಲ. ಆದರೆ ಸಂವಿಧಾನವೆನ್ನುವುದು ಇದೆ. ನೀವು format ಕೊಟ್ಟಿದ್ದೀರಿ. ಆ format ಪ್ರಕಾರ ನಾವು ಓದತಕ್ಕಂಥದ್ದು. ಹೇಳತಕ್ಕಂಥದ್ದು ಉಚಿತ. ಏಕೆಂದರೆ. you are creating a precedent. ನಾವಿಲ್ಲಿ ಏನು ಮಾಡುತ್ತೇವೆ. ಅದನ್ನು ಬೇರೆಯವರು ನೋಡುತ್ತಾರೆ. ಅದನ್ನೇ ಅನುಕರಣೆ ಮಾಡುತ್ತಾರೆ. ದಯವಿಟ್ಟು format ಪ್ರಕಾರ ಹೋಗುವುದು ಎಲ್ಲರಿಗೂ ಒಳ್ಳೆಯದು. ಏನಾಯಿತೆಂದರೆ. ಮಾನ್ಯ ಮುಖ್ಯಮಂತ್ರಿಗಳೇ ಅದನ್ನು ಪ್ರಾರಂಭ ಮಾಡಿದ್ದಾರೆ. Head Master ರವರೇ ಹಾಗೆ ಮಾಡಿದ

ಮೇಲೆ ಎಲ್ಲ ಶಿಕ್ಷಕರೂ. ವಿದ್ಯಾರ್ಥಿಗಳೂ ಹಾಗೆಯೇ ಮಾಡುತ್ತಾರೆ.

(ಗೊಂದಲ)

ಹಂಗಾಮಿ ಅಧ್ಯಕ್ಷರು: ಹಿಂದೆಯೂ ಕೂಡ ಇದೇ ರೀತಿ ಆಗಿದೆ. ದಯವಿಟ್ಟು ಈಗ ಪ್ರಮಾಣವಚನ ಸ್ವೀಕಾರವನ್ನು ಮುಂದುವರಿಸೋಣ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್ ; format ನಲ್ಲಿ ಕೊಟ್ಟಿರುವುದು ಪೂರ್ತಿ ಓದಿ ಅದರೆ ಜೊತೆಗೆ ಇದನ್ನು ಸೇರಿಸಿದ್ದೇವೆಯೇ ಹೊರತು ಬೇರೆ ಏನು ಸೇರಿಸಿಲ್ಲ.

ಶ್ರೀ ಎ. ರಾಮದಾಸ್ : ಮೊದಲನೇ ಬಾರಿಗೆ ನಾವಿಲ್ಲಿ ಅಧಿಕಾರಕ್ಕೆ ಬಂದಿದ್ದೇವೆ. ಕಳೆದ 50 ವರ್ಷಗಳಿಂದ ಏನು ಸಂಪ್ರದಾಯ ಹಾಕಿದೆಯೋ ಅದು ನಡಾವಳಿಗಳಲ್ಲಿದೆ. ಅದರ ಪ್ರಕಾರದಲ್ಲಿಯೇ ಅವು ಇರುವುದರಿಂದ ಆವತ್ತೇ ಇದನ್ನು ಹೇಳಿದ್ದರೆ ಚೆನ್ನಾಗಿತ್ತು.

ಹಂಗಾಮಿ ಅಧ್ಯಕ್ಷರು : ನಾನು ಅದನ್ನೇ ಹೇಳುತ್ತಿದ್ದೇನೆ. ಹಿಂದೆಯೂ ಕೂಡ. ಕಳೆದ ಬಾರಿಯೂ ಕೂಡ ಇದೇ ರೀತಿ ನಡೆದಿದೆ. ಆಕ್ಷೇಪಣೆ ಇದ್ದರೂ ಕೂಡ ಅದನ್ನೇ ಮುಂದುವರಿಸಿದೆ. ದಯವಿಟ್ಟು ಸಹಕಾರ ಕೊಡಿ. ಪ್ರಮಾಣವಚನ ಕಾರ್ಯವನ್ನು ಮುಂದುವರಿಸೋಣ.

ಶ್ರೀ ಡಿ.ಕೆ. ಶಿವಕುಮಾರ್ : ನಾವು ಸಹಕಾರ ಕೊಡುತ್ತೇವೆ. ನೀವು ಗಾಬರಿ ಮಾಡಿಕೊಳ್ಳಬೇಡಿ.

ಹಂಗಾಮಿ ಅಧ್ಯಕ್ಷರು : ಗಾಬರಿ ಏನೂ ಇಲ್ಲ.

ಶ್ರೀ ಡಿ.ಕೆ. ಶಿವಕುಮಾರ್ : ನಮ್ಮ ಆಕ್ಷೇಪಣೆ ಏನೆಂದರೆ. ಮಾನ್ಯ ಮುಖ್ಯಮಂತ್ರಿಗಳು ಕೂಡ ತಮ್ಮನ್ನು appoint ಮಾಡುವುಂಥ ಸಂದರ್ಭದಲ್ಲಿ ಕೂಡ seniority ಯಲ್ಲಿರುವವರನ್ನು ಕರೆದು ಅಂಥವರಿಗೆ ಅವಕಾಶ ಮಾಡಿಕೊಡಬೇಕಾಗಿತ್ತು. ಪಾಪ. ಅದೇಕೆ ನಿಮ್ಮನ್ನು Pro-tem Speaker ಮಾಡಿದರೋ ನಮಗೆ ಅರ್ಥವಾಗುತ್ತಿಲ್ಲ. ಏಕೆಂದರೆ 9 term ಗೆದ್ದವರು. 6 term. 5 term ಗೆದ್ದವರಿಗೆ ಕೊಡಬೇಕಾಗಿತ್ತು. Senior Member ಗೇ ಕೊಟ್ಟು ಮಾಡಬೇಕಾಗಿತ್ತು. ಯಾವುದೋ ಒಂದು Precedent ತೆಗೆದುಕೊಂಡು ತಮ್ಮನ್ನು ಆ ಸ್ಥಾನದಲ್ಲಿ ಕೂರಿಸಿರುವುದಿದೆಯಲ್ಲ ಇಲ್ಲಿಂದಲೇ ಪ್ರಾರಂಭವಾಗಿದೆ.

ದಯವಿಟ್ಟು. ಇನ್ನು ಮುಂದಕ್ಕೆ ಮುಖ್ಯಮಂತ್ರಿಗಳು ಇದನ್ನು ಗಮನಿಸಬೇಕು. ಪಕ್ಕದಲ್ಲಿ ಒಳ್ಳೆಯವರನ್ನು Law Minister ರನ್ನಾಗಿ ಮಾಡಿಕೊಂಡಿದ್ದೀರಿ. we are very happy. ಅವರೇನೂ ಕಾನೂನು ಬಿಟ್ಟು ಹೋಗುವುದಿಲ್ಲ. ದಯವಿಟ್ಟು ಈಗಲಾದರೂ ಅದನ್ನು ಏನಾದರೂ ಮಾಡಿ ಬದಲಾವಣೆ ಮಾಡಿ pro-tem Speaker ಸ್ಥಾನವನ್ನು ಹಿರಿಯ ಸದಸ್ಯರಿಗೆ ವಹಿಸುವುದಕ್ಕೆ ಆಗುತ್ತದೆಯೇ ಎಂದು ತಾವು ಯೋಚನೆ ಮಾಡಬೇಕು.

ಶ್ರೀ ಎ. ರಾಮದಾಸ್: ಅದು ನಮ್ಮ ಪಕ್ಷಕ್ಕೆ ಬಿಟ್ಟಂಥ ವಿಚಾರ. ಹಾಗಾಗಿ. ಅದನ್ನೂ ಅವರು ಮಾಡಿದ್ದಾರೆ. ಹಾಗಾಗಿ. ಅವರೆಲ್ಲ ಮಾರ್ಗದರ್ಶನ ಮಾಡಬೇಕಾದಂಥವರು. ಅಧಿವೇಶನದ ಮೊದಲನೇ ದಿನವೇ ಈ ವಿಚಾರಗಳನ್ನು ಹೇಳುವಂಥದ್ದು ಸ್ವಲ್ಪ ಸರಿ ಕಾಣುವುದಿಲ್ಲ.